ತೆಗೆದುಕೊಂಡರೆ ವರ್ಷಕ್ಕೆ ಕೋಟ್ಯಾಂತರ ರೂಪಾಯಿ ವ್ಯವಹಾರ ಇವತ್ತು ಮಹಾರಾಷ್ಟ್ರಕ್ಕೆ ವರ್ಗಾವಣೆಯಾಗುತ್ತಿದೆ ದಯವಿಟ್ಟು ಸರ್ಕಾರ ಹೆಚ್ಚಿನ ಕರ ವಿಧಿಸುವುದರಿಂದ ಸರ್ಕಾರಕ್ಕೆ ಹಾನಿಯಾಗುತ್ತಿದೆ. ದಯವಿಟ್ಟು ಸರ್ಕಾರದವರು ಒಂದು ಪರ್ಸೆಂಟ್ ಏನಿತ್ತು ಹಿಂದೆ ಅದನ್ನು ಮುಂದುವರಿಸುತ್ತಾರೆಯೇ ಎಂದು ಕೇಳಬಯಸುತ್ತಿದ್ದೇನೆ.

ಶ್ರೀ ಹೆಚ್. ನಾಗಪ್ಪ:- ಪರಿಶೀಲನೆ ಮಾಡುತ್ತೇನೆ.

ವಿಷಯ:- ಬೆಂಗಳೂರು–ಶಿವಮೊಗ್ಗ ಮಾರ್ಗದಲ್ಲಿ ಖಾಸಗಿ ಬಸ್‌ಗಳ ಓಡಾಟ.

372 (1791) **ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು–ಶಿವಮೊಗ್ಗ ಮಾರ್ಗವಾಗಿ ಸಂಚರಿಸಲು ಖಾಸಗಿ ಬಸ್ಸುಗಳಿಗೆ ಪರವಾನಗಿಯನ್ನು ಸರ್ಕಾರದವರು ನೀಡಿರುವುದು ನಿಜವೇ?

ಆ) ನೀಡಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು?

ಇ) ರಾಷ್ಟ್ರೀಯ ಪರವಾನಗಿ ಪಡೆದು ನಿಗದಿತ ಮಾರ್ಗಗಳಲ್ಲೂ ಖಾಸಗಿ ಬಸ್ಸುಗಳು ಸಂಚಾರ ನಡೆಸುತ್ತಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಈ ರೀತಿ ಅನಧಿಕೃತವಾಗಿ ಸಂಚರಿಸುತ್ತಿರುವ ಬಸ್ಸುಗಳಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟದ ಪ್ರಮಾಣವೆಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು):-

ಅ) ಹೌದು.

ಆ) 12

ಇ) ಹೌದು.

ಈ) ಮೋಟಾರು ವಾಹನ ತೆರಿಗೆ ಪಾವತಿ ಮಾಡುತ್ತಿರುವುದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:- ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ಶಿವಮೊಗ್ಗ ಮಾರ್ಗವಾಗಿ ಸಂಚರಿಸಲು ಖಾಸಗಿ ಬಸ್ಸುಗಳಿಗೆ ಪರವಾನಗಿಯನ್ನು ಸರ್ಕಾರದವರು ಕೊಟ್ಟಿದ್ದಾರೆಯೇ ಎಂದು ಕೇಳಿದ್ದೇನೆ. ಅದಕ್ಕೆ 'ಹೌದು' ಎಂದು ಹೇಳಿದ್ದಾರೆ. ನೀಡಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 'ಹನ್ನೆರಡು' ಎಂದು ಹೇಳಿದ್ದಾರೆ. ನಾನು ಶಾಸಕನಾಗಿ ಇಲ್ಲಿ ಉತ್ತರವನ್ನು ನೋಡಿದರೆ ಹನ್ನೆರಡಕ್ಕಿಂತ ಜಾಸ್ತಿ ಬಸ್ಸುಗಳು ಓಡಾಡುತ್ತಾ ಇವೆ. ಈ ಖಾಸಗಿ ಬಸ್ಸುಗಳಲ್ಲಿ, ಏನು ಈ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನವರು ಒಂದು ಪ್ರಯಾಣದರವನ್ನು ನಿಗದಿ ಮಾಡಿದ್ದಾರೆ, ಆದರ ಎರಡು ಪಟ್ಟು ಹಣ ತೆಗೆದುಕೊಳ್ಳುತ್ತಾರೆ. ಮಾನ್ಯ ಸಚಿವರು ಅದನ್ನು ಪರಿಶೀಲಿಸಬೇಕು. ಖಾಸಗಿ ಬಸ್ಸುಗಳು

ಏನು ಹನ್ನೆರಡು ಓಡುತ್ತಿವೆ ಎಂದು ಹೇಳಿದ್ದಾರೆ, ಅದಕ್ಕಿಂತ ಜಾಸ್ತಿ ಬಸ್ಸುಗಳು ಓಡುತ್ತಿವೆ. ಈ ಹನ್ನೆರಡು ಪರವಾನಗಿ ಇರುವುದರ ಜೊತೆಗೆ ಇನ್ನ್ಯಾವುದೋ ಬೇರೆ ಬಸ್ಸುಗಳು ಓಡುತ್ತಿವೆ ಎನ್ನುವಂಥ ಪ್ರಶ್ನೆ ನಮ್ಮಲ್ಲಿ ಉದ್ಭವಿಸಿದೆ. ಇನ್ನೊಂದು, 'ರಾಷ್ಟ್ರೀಯ ಪರವಾನಗಿ ಪಡೆದು ನಿಗದಿತ ಮಾರ್ಗಗಳಲ್ಲೂ ಖಾಸಗಿ ಬಸ್ಸುಗಳು ಸಂಚಾರ ನಡೆಸುತ್ತಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ' ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದಾರೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೇ ಎಂದು ಕೇಳಿದರೆ ಮೋಟಾರು ವಾಹನ ತೆರಿಗೆ ಪಾವತಿಯಿಂದ ಆದಾಯ ಬರುತ್ತದೆ, ನಷ್ಟವಾಗುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಮೋಟಾರ್ ವಾಹನ ತೆರಿಗೆಯಿಂದ ಇದರಲ್ಲಿ ಆದಾಯ ಬರುವುದಾದರೆ ಇನ್ನೂ ಪರವಾನಗಿಯನ್ನು ಜಾಸ್ತಿ ಮಾಡಿ. ಪ್ರಯಾಣಿಕರಿಗೆ ಒಳ್ಳೆಯದಾಗುತ್ತದೆ. ಇವತ್ತು ಏನಾಗಿದೆ ಎಂದರೆ ಸರ್ಕಾರಿ ಬಸ್ಸುಗಳಲ್ಲಿ ಪ್ರಯಾಣಿಕರು ಹೋಗಲಿಕ್ಕೆ ಹಿಂಜರಿಕೆ ಮಾಡುತ್ತಿದ್ದಾರೆ. ಆಲ್ಲಿಯ ಸಿಬ್ಬಂದಿವರ್ಗದವರ ನಡವಳಿಕೆ, ಅವರ ವಿಧಾನಕ್ರಮ, ಅವರು ಪ್ರಯಾಣಿಕರಿಗೆ ಜೋರು ಮಾಡುವುದು, ಇದನ್ನು ವಿಚಾರ ಮಾಡಿದರೆ ಖಾಸಗಿ ಬಸ್ಸಿನವರು ಸರ್ಕಾರಿ ಬಸ್ಸಿನವರಿಗಿಂತ ಪರವಾಗಿಲ್ಲ ಎನ್ನುವ ಅಭಿಪ್ರಾಯಕ್ಕೆ ಪ್ರಯಾಣಿಕರು ಬಂದಿದ್ದಾರೆ. ಏಕೆಂದರೆ ಅಲ್ಲಿ ಪ್ರಯಾಣಿಕರು ಹೋಗುತ್ತಾ ಇದ್ದರೆ. . .

ಉಪಾಧ್ಯಕ್ಷರು:- ಕೃಷ್ಣಮೂರ್ತಿಯವರೇ, ಭಾಷಣ ಮಾಡುವ ಹಾಗಿಲ್ಲ. ನಿರ್ದಿಷ್ಟವಾಗಿ ಉಪ ಪ್ರಶ್ನೆಯನ್ನು ಕೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:-ನಿರ್ದಿಷ್ಟವಾಗಿಯೇ ಕೇಳುತ್ತಿದ್ದೇನೆ. ಮೋಟಾರು ವಾಹನ ಕಾಯಿದೆ ಪ್ರಕಾರ ಆದಾಯ ಬರುವುದಾದರೆ ಪರವಾನಗಿ ಏಕೆ ಜಾಸ್ತಿ ಕೊಡಬಾರದು? ಅದು ಹನ್ನೆರಡು ಎಂದು ಹೇಳುತ್ತಿದ್ದಾರೆ, ಅದು ಜಾಸ್ತಿ ಇದೆ ಎಂದು ಹೇಳಿದೆ. ಅದಕ್ಕೆ ಸಚಿವರು ಉತ್ತರ ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಅಧ್ಯಕ್ಷರೇ, ಮಾನ್ಯ ಕೃಷ್ಣಮೂರ್ತಿಯವರು ಹೇಳಿರತಕ್ಕಂಥಾದ್ದು ನಿಜ. 12 ಪರ್ಮಿಟ್‌ಗಳನ್ನು ಬೆಂಗಳೂರು ಮತ್ತು ಶಿವಮೊಗ್ಗ ನಡುವೆ ಬೇರೆ ಬೇರೆ ಮಾರ್ಗಗಳಲ್ಲಿ ಓಡಾಡುವುದಕ್ಕೆ ಎಂದು ಹೇಳಿ ಕೊಟ್ಟಿದ್ದಾರೆ. ಅದೂ ಅಲ್ಲದೆ ಈ ರೂಟಿನಲ್ಲಿ ಶಿವಮೊಗ್ಗ ಮತ್ತು ಬೆಂಗಳೂರು ಮಧ್ಯೆ ಈ ಆಲ್ ಇಂಡಿಯಾ ಟೂರಿಸ್ಟ್ ಪರ್ಮಿಟ್‌ಗಳನ್ನು ಕೊಟ್ಟಿರತಕ್ಕಂಥ ಅನೇಕ ಬಸ್ಸುಗಳೂ ಓಡಾಡುತ್ತಿವೆ. ಆಲ್ ಇಂಡಿಯಾ ಟೂರಿಸ್ಟ್ ಬಸ್‌ಗಳ ಪರ್ಮಿಟ್‌ಗಳನ್ನು ನಾವು ಹೆಚ್ಚಿಗೆ ಕೊಡುವುದಕ್ಕೆ ಆಗುವುದಿಲ್ಲ. ಅದರ ಮೇಲೆ ನಿರ್ಬಂಧ ಇಲ್ಲ. ಎಲ್ಲೆಲ್ಲಿ ಟ್ರಾಫಿಕ್ ಇದೆ, ಅಲ್ಲೆಲ್ಲಾ ಅವರು ಪರ್ಮಿಟ್‌ಗಳನ್ನು ತೆಗೆದುಕೊಂಡು ಓಡಿಸಬಹುದು. ಅದರಿಂದ ಏನಾದರೂ ಸರ್ಕರಕ್ಕೆ ನಷ್ಟ ಇದೆಯೇ ಎಂದು ಕೇಳಿದ್ದಾರೆ. ಟ್ಯಾಕ್ಸ್‌ನ್ನು ಕಟ್ಟಲೇಬೇಕಾಗುತ್ತದೆ. ಯಾರು ಟ್ಯಾಕ್ಸ್ ಕೊಡುವುದಿಲ್ಲ, ಟ್ಯಾಕ್ಸ್ ಕಟ್ಟದೆ ಓಡಿಸುತ್ತಿದ್ದಾರೆ ಅವರ ಮೇಲೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ ಎಂದು ಇಷ್ಟು ಮಾತ್ರ ನಾನು ಉತ್ತರ ಹೇಳಬಲ್ಲೆ.